ಕನ್ನಡಪ್ರಭ



ಶುಕ್ರವಾರ, 11 ಆಗಸ್ಟ್ 2006

# ಇ– ಮಾಧ್ಯಮದ ಸಾಂಸ್ಕೃತಿಕ ದಾಳಿ

## ● ಇಂಟರ್‌ನೆಟ್‌ನಲ್ಲಿ ಇ -ಪುಸ್ತಕ ವಿತರಣೆ ಸಾಕಷ್ಟು ಸಂಕೀರ್ಣ ವಿಷಯವಾಗಿದೆ


ಡಾ.ಎಂ.ಎಸ್.ಶ್ರೀಧರ್

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ತ್ವರಿತ ಬೆಳವಣಿಗೆ ವಿಶ್ವವ್ಯಾಪಿಯಾಗಿ ಪುಸ್ತಕ ಸಂಸ್ಕೃತಿ ಮತ್ತು ಓದುವ ಹವ್ಯಾಸಕ್ಕೆ ಮಾರಕವಾಗಿದೆ ಎಂದು ಕೆಲವರು, ಮತ್ತು ಪೂರಕ ಎಂದು ಮತ್ತೆ ಕೆಲವರು ಹೇಳುತ್ತಲೇ ಇದ್ದಾರೆ. ಅಂತಹ ಗಂಭೀರ ಸಮೀಕ್ಷೆ, ಅಧ್ಯಯನಗಳಿಲ್ಲವಾಗಿ ಓದುವ ಹವ್ಯಾಸದ ಬಗೆಗಿನ ಹೇಳಿಕೆಗಳಂತೆ ಇವುಗಳೂ ವೈಯಕ್ತಿಕ ಅನಿಸಿಕೆಗಳಾಗಿವೆ. ಪುಸ್ತಕಗಳನ್ನು ಡಿಜಿಟೈಸ್ ಮಾಡಿ ವಿಶ್ವಾದ್ಯಂತ ಇಂಟರ್‌ನೆಟ್‌ನಲ್ಲಿ ದೊರಕಿಸುವ ಹಲವಾರು ಯೋಜನೆಗಳು ಇನ್ನು ಸಾಕಷ್ಟು ಗೊಂದಲದಲ್ಲಿದ್ದು, ಯಾರಿಗೆ ಬೇಕು ಇ–ಪುಸ್ತಕ ಎಂಬ ಪ್ರಶ್ನೆ ಬೃಹದಾಕಾರವಾಗಿದೆ.

ಇ–ಪುಸ್ತಕಗಳ ಪ್ರತಿಕೂಲಗಳತ್ತ ಗಮನ ಹರಿಸಿ, ಬಿಳಿಯ ಹಾಳೆಯ ಮೇಲಿನ ಕಪ್ಪು ಅಕ್ಷರಗಳ ಬದಲಿಗೆ ಕಾಗದರಹಿತ ಪುಸ್ತಕವನ್ನು ಕಂಪ್ಯೂಟರ್ ತೆರೆಯ ಮೇಲೆ ಓದಲು ಬಯಸುವರಾರು? ಇ–ಪುಸ್ತಕಗಳನ್ನು ಓದಲು ಬೇಕಾಗುವ ಇ–ರೀಡರ್‌ಗಳನ್ನು ಕೊಳ್ಳಲು ನಾವು ಸಿದ್ಧರಿದ್ದೇವೆಯೇ? ಅದು ಸಾಧ್ಯವಿರುವುದಾದರೂ ಯಾರಿಗೆ? ಇ–ಮನರಂಜನೆಗೆ ದೊರೆತ ಪ್ರೋತ್ಸಾಹವನ್ನು ಇ–ಪುಸ್ತಕಗಳಿಗೂ ನಿರೀಕ್ಷಿಸಬಹುದೆ?

– ಇತ್ಯಾದಿ ಪ್ರಶ್ನೆಗಳಿಗೆ ಸಮರ್ಪಕ ಉತ್ತರವಿಲ್ಲ. ಇಂಟರ್‌ನೆಟ್‌ನಲ್ಲಿ ಇ–ಪುಸ್ತಕ ವಿತರಣೆ ಸಾಕಷ್ಟು ಸಂಕೀರ್ಣ ವಿಷಯವಾಗಿದೆ. ಸತತ ಪರಿಷ್ಕರಣೆಗೊಳ್ಳುತ್ತಿರುವ ಇ–ಮಾಧ್ಯಮದ ಸಲಕರಣೆಗಳನ್ನು ಸಮರ್ಪಕವಾಗಿ ಬಳಸಲು ಬೇಕಾಗುವ ಹೊಸ ಗ್ರಾಹಕ ಕೌಶಲಗಳನ್ನು ಜನಸಾಮಾನ್ಯರು ಸುಲಭವಾಗಿ ಒಗ್ಗೂಡಿಸಿಕೊಳ್ಳಲಾಗುತ್ತಿಲ್ಲ. ಮುದ್ರಿತ ಮಾಧ್ಯಮದ ಜಾಹಿರಾತುಗಳನ್ನು ಕಸಿದು, ಸುದ್ದಿ ಪ್ರಸಾರಕ್ಕೆ ಪೈಪೋಟಿ ನೀಡಿ, ಮುದ್ರಿತ ಮಾಧ್ಯಮಕ್ಕೆ ಸವಾಲಾಗಿ ಇ–ಮಾಧ್ಯಮ ಆರ್ಥಿಕವಾಗಿ ಬೃಹದಾಕಾರವಾಗಿ ಬೆಳೆಯುತ್ತಿದೆ. ನಿಜ. ಆದರೆ ಸಾಮಾನ್ಯ ನಾಗರಿಕ ಮುದ್ರಿತ ಪುಸ್ತಕ/ ಪತ್ರಿಕೆಗಳ ಖರೀದಿ ನಿಲ್ಲಿಸಿ ಇಂಟರ್‌ನೆಟ್‌ನಲ್ಲೇ ಅವುಗಳನ್ನು ಓದಲು ತಯಾರಿಲ್ಲ ಎಂಬುದೂ ಅಷ್ಟೇ ಸತ್ಯ.

ಓದುವ ಹವ್ಯಾಸ ಕಡಿಮೆಯಾಗುತ್ತಿದೆ ಎಂಬುದರ ಪರ, ವಿರುದ್ಧ ಅಭಿಪ್ರಾಯಗಳಿದ್ದರೂ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಸಾಂಸ್ಕೃತಿಕ ದಾಳಿಯ ಆತಂಕ ಎಲ್ಲರಲ್ಲೂ ಇದೆ. ಜಾಗತೀಕರಣವು ದೇಶೀ ಸಂಸ್ಕೃತಿಯ ಮೇಲಿನ ಈ ದಾಳಿಗೆ ವೇಗವರ್ಧಕವಾಗಿ ಪರಿಣಮಿಸಿದೆ. ಇ–ಮಾಧ್ಯಮ. ಅದರಲ್ಲೂ ಇಂಟರ್‌ನೆಟ್ ಪ್ರಬಲವಾಗಿ ಇಂಗ್ಲಿಷ್ ಮಾತನಾಡುವ (ಶೇ. 80) ಪಾಶ್ಚಾತ್ಯರ (ಶೇ. 90), ಅದರಲ್ಲೂ ಅಮೆರಿಕನ್ನರ (ಶೇ. 73) ಸಂಸ್ಕೃತಿಯನ್ನೇ ಬಿಂಬಿಸುವುದರಿಂದ ದೇಶೀಯ (ಮುದ್ರಿತ) ಪುಸ್ತಕ ಸಂಸ್ಕೃತಿಗೆ ಹೆಚ್ಚು ಮಾರಕವಾಗುವ ಸಾಧ್ಯತೆಗಳಿವೆ. ವಿಚಿತ್ರವೆಂದರೆ ಮೂಲತಃ ಇ–ಮಾಧ್ಯಮ ಇಂಗ್ಲಿಷ್ ಸಂಸ್ಕೃತಿಯನ್ನೆ ಬೆಂಬಲಿಸುವುದರಿಂದ, ಕಂಪ್ಯೂಟರ್ ಮತ್ತು ಇಂಟರ್‌ನೆಟ್‌ನಲ್ಲಿ ದೇಶೀಯ ಭಾಷೆಯಲ್ಲಿ ವ್ಯವಹರಿಸಲು ಕೂಡ ಇಂಗ್ಲಿಷ್ ಅಕ್ಷರ/ ಭಾಷಾ ಜ್ಞಾನ ಬೇಕು. ಅದರಿಂದಾಗಿ ದೇಶೀಯ ಭಾಷೆ/ ಅಕ್ಷರ ಬಳಕೆ ಕಡಿಮೆಯಾಗಿ ಭಾಷಾಜ್ಞಾನ ಕುಂಠಿತವಾಗುತ್ತದೆ. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳು ಇತರ ತಂತ್ರಜ್ಞಾನಗಳಂತೆ ಸಾಂಸ್ಕೃತಿಕವಾಗಿ ತಟಸ್ಥವಾಗಿರುವಂತಹುಗಳಲ್ಲ. ಅವು ಸಾಂಸ್ಕೃತಿಕವಾಗಿ ಬಲವಾದ ದಾಳಿ ಮಾಡಬಹುದಾದಂತಹ ದೈತ್ಯ aggressive ತಂತ್ರಜ್ಞಾನಗಳಾಗಿರುವುದರಿಂದ ವಿಭಿನ್ನ ಸಂಸ್ಕೃತಿಗಳನ್ನ ಕರಗಿಸಿ ಏಕ ಸಂಸ್ಕೃತಿಯನ್ನಾಗಿಸುವ ಕುದಿವ ಮೂಸೆಗಳಾಗಿ ದೇಶೀಯ ಸಂಸ್ಕೃತಿಯ ದಿವಾಳಿತನಕ್ಕೆ ನಾಂದಿಯಾಗಲಿವೆಯೆ ಎಂಬ ಅನುಮಾನ ಹುಟ್ಟಿಸುತ್ತವೆ. ಸೃಜನಶೀಲತೆ ಇ–ಮಾಧ್ಯಮ ಬಳಕೆಯನ್ನು ಅಷ್ಟಾಗಿ ಅವಲಂಬಿಸಿಲ್ಲ. ಈ ತಂತ್ರಜ್ಞಾನಗಳು ಜನಸಾಮಾನ್ಯರ ಉತ್ಪಾದನಾ ಸಾಮರ್ಥ್ಯ, ಜ್ಞಾನ ಮತ್ತು ವಿವೇಕವನ್ನು ಹೆಚ್ಚಿಸಿವೆಯೆ ಎಂಬ ಅನುಮಾನವೂ ಇದೆ. ಆದರೆ ದೇಶೀಯ ಕೌಶಲ್ಯತೆಗಳನ್ನು ಮೂಲೆಗುಂಪು ಮಾಡುವಲ್ಲಿ ಇವು ಸಾಕಷ್ಟು ಯಶಸ್ವಿಯಾಗಿವೆ.



ಓದುವ ಹವ್ಯಾಸ ಕಡಿಮೆ ಆಗುತ್ತಿದೆ ಎಂಬುದರ ಪರ, ವಿರುದ್ಧ ಅಭಿಪ್ರಾಯಗಳಿದ್ದರೂ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಸಾಂಸ್ಕೃತಿಕ ದಾಳಿಯ ಆತಂಕ ಎಲ್ಲರಲ್ಲೂ ಇದೆ

ಹಿಂದೆಂದಿಗಿಂತಲೂ ಈಗ ಹೆಚ್ಚು ಮಾಹಿತಿ ಪ್ರಕಟಗೊಂಡು ವಿಶ್ವಾದ್ಯಂತ ಪ್ರಸಾರವಾಗುತ್ತಿದ್ದರೂ ನಮಗೆ ಬೇಕಾದದ್ದೆಲ್ಲವೂ ಸುಲಭವಾಗಿ ದೊರಕುತ್ತದೆ ಎಂದು ಭಾವಿಸಲಾಗದು. ಹೆಚ್ಚು ಹೆಚ್ಚು ಪುಸ್ತಕ, ಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಸುಲಭದಲ್ಲಿ ಕ್ಷಣಾರ್ಧದಲ್ಲಿ ಕಂಪ್ಯೂಟರ್ ಪರದೆಯ ಮೇಲೆ ದೊರಕಿಸಿಕೊಂಡಾಕ್ಷಣ ಅದರಿಂದ ನಾವು ಹೆಚ್ಚು ಮಾಹಿತಿ ಪಡೆದೆವೆಂದಾಗಲಿ, ಅದನ್ನು ಹೆಚ್ಚು ಗ್ರಹಿಸಿದೆವೆಂದಾಗಲಿ ಹೇಳಲು ಬರುವುದಿಲ್ಲ. ಸಂವಹನ ತಂತ್ರಜ್ಞಾನ ಎಷ್ಟು ಹೆಚ್ಚು ವೇಗವಾಗಿ ಮಾಹಿತಿಯನ್ನು ರವಾನಿಸುತ್ತದೆಯೊ ಅದಕ್ಕೆ ವಿಲೋಮವಾಗಿ ಅದರ ಸ್ನಿಗ್ಧತೆ (velocity and viscosity of information are inversely related) ಇರುತ್ತದೆಯೆಂದು ಹೇಳುವುದುಂಟು. ಮಾಹಿತಿ ತಂತ್ರಜ್ಞಾನಕ್ಕೆ ಪ್ರಕೃತಿಯಂತೆ ತನ್ನನ್ನು ತಾನು ಸರಿದೂಗಿಸಿ, ನಿಯಂತ್ರಿಸಿ, ಸರಿಪಡಿಸಿ ಚೊಕ್ಕಟಗೊಳಿಸುವ ವಿಶೇಷ ಗುಣವಿಲ್ಲ.

ಈ ತಂತ್ರಜ್ಞಾನಗಳು ಸಂತೋಷ ಮತ್ತು ತೃಪ್ತಿಯಿಂದ ಬುದ್ಧಿ ಮತ್ತು ಕೈಗಳನ್ನು ಬಳಸಿ ಮಾಡುತ್ತಿದ್ದ ಹಲವಾರು ಸೃಜನಾತ್ಮಕ ಕೆಲಸಗಳನ್ನು ಮನುಷ್ಯನಿಂದ ಕಸಿದುಕೊಂಡು ಪುನರಾವರ್ತಿತ ಮತ್ತು ತುಂಡುತುಂಡಾದ (ಅಪೂರ್ಣವಾದ) ಬೇಸರದ ವಿಪರೀತ ಕೆಲಸಕ್ಕೆ ಹಚ್ಚಿವೆ. ನೂತನ ತಾಂತ್ರಿಕತೆಗಳು ಸಾಮಾಜಿಕವಾಗಿ ವ್ಯಕ್ತಿಗಳನ್ನು ಪ್ರತ್ಯೇಕಿಸಿ ಒಂಟಿತನದಲ್ಲೇ ಸ್ವಯಂ ಖುಷಿಪಡುವುದನ್ನು ಪ್ರೋತ್ಸಾಹಿಸುತ್ತವೆ. ಸಂವಹನ ಸಾಧ್ಯತೆಗಳು ಹೆಚ್ಚಿದಂತೆಲ್ಲ ನೆರೆಹೊರೆಯವರ ಮತ್ತು ಬಂಧುಬಾಂಧವರ ಸಂಪರ್ಕ ಕಡಿಮೆಯಾಗುತ್ತಿರುವುದು ಒಂದು ವಿಪರ್ಯಾಸ. ಯಂತ್ರಗಳಿಂದ ದಾಖಲಿಸಿದ (recorded) ಸಂದೇಶಗಳನ್ನು ಕೇಳುತ್ತಾ ಮಾನವೀಯ ಮೌಲ್ಯಗಳ ರುಚಿ ಕಡಿಮೆಯಾದರೆ ಆಶ್ಚರ್ಯವಿಲ್ಲ. ಮುದ್ರಿತ ಮಾಧ್ಯಮದಿಂದ ಅದರಲ್ಲೂ ಪುಸ್ತಕ ಸಂಸ್ಕೃತಿಯಿಂದ ಮಾತ್ರ ಈ ಅನಾಹುತಗಳನ್ನು ತಪ್ಪಿಸಲು ಸಾಧ್ಯ.

**ಪುಸ್ತಕ ಕ್ಲಬ್‌ಗಳು:** ಬುಕ್ ಕ್ಲಬ್ ಅಥವಾ ಓದುವ ಸಂಘಗಳಲ್ಲಿ ಪ್ರತಿ ತಿಂಗಳು ಒಂದು ಪುಸ್ತಕವನ್ನು ಸದಸ್ಯರೆಲ್ಲರೂ ಓದಿ ಸಭೆ ಸೇರಿ ಚರ್ಚಿಸುತ್ತಾರೆ. ಬ್ರಿಟನ್‌ನಲ್ಲಿ 50,000 ಮಂದಿ ಪುಸ್ತಕ ಕ್ಲಬ್‌ಗಳ ಸದಸ್ಯರಿದ್ದಾರೆ. ಅದರ ಹತ್ತು ಪಟ್ಟು ಹೆಚ್ಚು ಸದಸ್ಯರು ಅಮೆರಿಕದಲ್ಲಿದ್ದಾರೆ. ಪ್ರಪಂಚದಲ್ಲಿ 350 ಇಂತಹ ಪುಸ್ತಕ ಓದುವ ಸಂಘಗಳಿವೆ. ಪುಸ್ತಕ ಕ್ಲಬ್‌ಗಳಿಗೆ ಎರಡು ಶತಮಾನಕ್ಕೂ ಹೆಚ್ಚಿನ ಇತಿಹಾಸವಿದೆ. ಕೊಲಂಬಿಯಾದ ಡಾಲ್ಟನ್ ಬುಕ್ ಕ್ಲಬ್ 17 ಸದಸ್ಯರೊಂದಿಗೆ 1764 ರಲ್ಲಿ ಆರಂಭಗೊಂಡಿತು. ಮಾಧ್ಯಮಗಳ ಪ್ರಚಾರದ ಒತ್ತಾಸೆಯಿಂದ ಇಂತಹ ಕ್ಲಬ್‌ಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿವೆ. ಮೇಲ್ ಆನ್ ಸಂಡೆ ಪತ್ರಿಕೆ, ಆರೆಂಜ್ ಮೊಬೈಲ್ ಸಂಸ್ಥೆ, ಒಪ್ರಾ ವಿನ್‌ಫ್ರೇ ಇತ್ಯಾದಿಗಳು ಪುಸ್ತಕ ಚರ್ಚೆ, ಪುಸ್ತಕ ಕ್ಲಬ್ ಚಟುವಟಿಕೆಗೆ ಮತ್ತು ಪುಸ್ತಕ ಸಂಸ್ಕೃತಿಗೆ ಗಣನೀಯ ರೀತಿಯಲ್ಲಿ ನೆರವಾಗಿವೆ. ಇಂದು ಸದಸ್ಯರಲ್ಲಿ ಪ್ರತಿಶತ 38 ರಷ್ಟು ಮಂದಿ ಎರಡು ವರ್ಷದಿಂದ ಸದಸ್ಯರಾಗಿದ್ದಾರೆ. ಆಶ್ಚರ್ಯವೆಂದರೆ ಆರಂಭದ ವರ್ಷಗಳಲ್ಲಿ ಪುರುಷ ಪ್ರಧಾನವಾಗಿದ್ದ ಈ ಕ್ಲಬ್‌ಗಳು ಇಂದು ಪ್ರತಿಶತ 69 ರಷ್ಟು ಸಂಪೂರ್ಣ ಮಹಿಳಾ ಕ್ಲಬ್‌ಗಳಾಗಿವೆ. (ಸಂಪೂರ್ಣ ಪುರುಷರೇ ಇರುವ ಕ್ಲಬ್‌ಗಳು ಶೇ. 4 ರಷ್ಟು ಮಾತ್ರ). ಪುಸ್ತಕ ಕ್ಲಬ್‌ಗಳಲ್ಲಿ ಪುಸ್ತಕ ಓದುವುದರೊಟ್ಟಿಗೆ ತಿನಿಸು ಮತ್ತು ಪಾನೀಯಗಳೂ ಮತ್ತು ಸದಸ್ಯರುಗಳ ಪರಸ್ಪರ ಭೇಟಿ ಮುಖ್ಯೋದ್ದೇಶವಾಗಿರುತ್ತದೆ. ವಿಮರ್ಶೆಗಳು ಮತ್ತು 'ನನ್ನ ಮೆಚ್ಚಿನ ಪುಸ್ತಕ' ಅಂಕಣಗಳು, ಪುಸ್ತಕ ಕ್ಲಬ್‌ಗಳಂತೆ ಓದುವ ಹವ್ಯಾಸಕ್ಕೆ ಸಾಕಷ್ಟು ಸ್ಫೂರ್ತಿ ಮತ್ತು ಪ್ರಚಾರ ಒದಗಿಸುತ್ತಲಿವೆ. ಬೆಂಗಳೂರಿನಲ್ಲಿ (ಇಂಗ್ಲಿಷ್) ಪುಸ್ತಕ ಕ್ಲಬ್‌ವೊಂದನ್ನು ಮೊದಲ ಬಾರಿಗೆ ಮಹಿಳೆಯೊಬ್ಬರು ಪ್ರಾರಂಭಿಸಿದ್ದು ಸ್ವಾರಸ್ಯಕರ ಸಂಗತಿ. ಅನೇಕ ವರ್ಷಗಳ ಕಾಲ ಯಶಸ್ವಿಯಾಗಿ ನಡೆದು ಸ್ಥಗಿತಗೊಂಡಿದ್ದ ಈ ಕ್ಲಬ್ ಪುನರಾರಂಭವಾಗುವುದರಲ್ಲಿದೆ. ಬುಕ್ ಕ್ಲಬ್‌ಗಳಂತೆಯೆ ವಾರಕ್ಕೊಮ್ಮೆ ತಾವು ಓದಿದ ಲೇಖನವೊಂದನ್ನು ಮಂಡಿಸಿ ಚರ್ಚಿಸುವ ಜರ್ನಲ್ ಕ್ಲಬ್‌ಗಳನ್ನು ವಿಜ್ಞಾನಿಗಳು ಬಹಳ ಕಾಲದಿಂದಲೂ ನಡೆಸಿಕೊಂಡು ಬರುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು.

## ಲೇಖಕರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೫ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, 1978 ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್‌ರವರು ನಾಲ್ಕು ಪುಸ್ತಕಗಳು ಹಾಗೂ ೭೪ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ. ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದು, ಇದಲ್ಲದೆ ಸುಮಾರು ೨೨ ಲೇಖನಗಳನ್ನು ವಿವಿಧ ಸಮ್ಮೇಳನಗಳಲ್ಲಿ ಮಂಡಿಸಿದ್ದಾರೆ.

**E-mail:** sridharmirle@yahoo.com, mirlesridhar@gmail.com, sridhar@isac.gov.in **;**
**Phone:** 91-80-25084451; **Fax:** 91-80-25084475.